ಕರ್ನಾಟಕ ವಿಧಾನಸಭೆ
KARNATAKA LEGISLATIVE ASSEMBLY

ಮಂಗಳವಾರ ೫ನೇ ಜನವರಿ ೧೯೯೩, ಪುಷ್ಯ ೧೫, ಶಕ ೧೯೧೪,

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ ೧೧.೦೫ ಗಂಟೆಗೆ ಸಮಾವೇಶಗೊಂಡಿತು.

ಉಪಾಧ್ಯಕ್ಷರು : **(ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ)** ಅವರು

ಪೀಠವನ್ನು ಅಲಂಕರಿಸಿದ್ದರು.

ಪ್ರಶ್ನೋತ್ತರಗಳು

(ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.)

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿ) : ಮಾನ್ಯ ಉಪಾಧ್ಯಕ್ಷರೇ, 121(36)ನೇ ಪ್ರಶ್ನೆಯನ್ನು ತಡೆಹಿಡಿಯಬೇಕೆಂದು ನಾನು ಮನವಿ ಮಾಡುತ್ತೇನೆ.

ಉಪಾಧ್ಯಕ್ಷರು : ಇದನ್ನು ನಾನು ವಿತ್‌ಹೆಲ್ಡ್ ಮಾಡಿದ್ದೇನೆ. ಮತ್ತೆ ತಿರುಗಿ ಹಾಕೋಣ.

ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಲ್ಲಿ ರೋಸ್ಟರ್ ಪದ್ಧತಿ

170 - ಶ್ರೀಮತಿ ಮೋಟಮ್ಮ (ಮೂಡಿಗೆರೆ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಲ್ಲಿ ನೇಮಕಾತಿ ಮಾಡುವಾಗ ಹಾಗೂ ಬಡ್ತಿ ನೀಡುವಾಗ ಮೀಸಲಾತಿ ರೋಸ್ಟರ್ ಪದ್ಧತಿಯನ್ನು ಪಾಲಿಸಲಾಗಿದೆಯೇ?

ಆ) ಹಾಗಿದ್ದಲ್ಲಿ, ಅಭಿವೃದ್ಧಿ ಅಧಿಕಾರಿ ಹುದ್ದೆಗೆ ಬಡ್ತಿ ನೀಡುವಾಗ ಮೀಸಲಾತಿಯನ್ನು ಪಾಲಿಸದಿರಲು ಕಾರಣಗಳೇನು?

ಇ) 1984ರಲ್ಲಿ ಮೀಸಲಾತಿ ಹುದ್ದೆಗಳ ಆಯ್ಕೆಗಾಗಿ ಅರ್ಜಿಗಳನ್ನು ಆಹ್ವಾನಿಸಿದ್ದು ಆಯ್ಕೆ ಸಂದರ್ಭದಲ್ಲಿ ಬೇರೆ ವರ್ಗದವರನ್ನು ಆಯ್ಕೆ ಮಾಡಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಈ) ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರವು ಮೀಸಲಾತಿ ಉಲ್ಲಂಘನೆ ಮಾಡಿದವರರ ಮೇಲೆ ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) :

ಅ) ಹೌದು.

ಆ) ಅಭಿವೃದ್ಧಿ ಅಧಿಕಾರಿ ಹುದ್ದೆಗೆ 1987ರಲ್ಲಿ ಬಡ್ತಿ ನೀಡುವಾಗ ಉಪಅಭಿವೃದ್ಧಿ ಅಧಿಕಾರಿಯಾಗಿ ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡಕ್ಕೆ ಸೇರಿದ ಅಭ್ಯರ್ಥಿಗಳು

ಇಲ್ಲದಿದ್ದ ಕಾರಣ ಸದರಿ ಹುದ್ದೆಯನ್ನು ಬೇರೆ ಪಂಗಡಕ್ಕೆ ಸೇರಿದ ಅಭ್ಯರ್ಥಿಗೆ ಬಡ್ತಿ ನೀಡಿ ತುಂಬಲಾಯಿತು.

ಇ) 1984ರಲ್ಲಿ ನೇಮಕಾತಿಗಳನ್ನು ಮಾಡುವಾಗ ಕೆಲವೊಂದು ಹುದ್ದೆಗಳಿಗೆ ಪರಿಶಿಷ್ಟ ಪಂಗಡ/ಜಾತಿ ಅಭ್ಯರ್ಥಿಗಳು ಲಭ್ಯವಿಲ್ಲದ ಕಾರಣ ಬೇರೆ ವರ್ಗದ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗಿರುತ್ತದೆ.

ಈ) ಈ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀಮತಿ ಮೋಟಮ್ಮ : ಸನ್ಮಾನ್ಯ ಉಪಾಧ್ಯಕ್ಷೆಣಿಯವರೆ, ನನ್ನ ಪ್ರಶ್ನೆಗೆ ಉತ್ತರ ಹೇಳುವಾಗ ಇಲ್ಲಿ ಅಭ್ಯರ್ಥಿಗಳು ಸಿಗದೇ ಇದ್ದ ಕಾರಣ ನಾವು ಬೇರೆ ವರ್ಗದವರನ್ನು ಭರ್ತಿ ಮಾಡಿದ್ದೇವೆ ಎಂದು ಹೇಳಿದ್ದಾರೆ. ನಾನು ತಮ್ಮ ಮೂಲಕ ಪ್ರಾರ್ಥನೆ ಮಾಡುವುದಕ್ಕೆ ಇಚ್ಛಿಪಡುತ್ತೇನೆ. ಏಕೆಂದರೆ, ಯಾವುದೇ ಹುದ್ದೆಯನ್ನು ಹರಿಜನ-ಗಿರಿಜನರಿಗೆ ಕಾದಿರಿಸಿದ್ದು, ಆ ಹುದ್ದೆಯನ್ನು ಭರ್ತಿ ಮಾಡಬೇಕಾದಾಗ ಅದಕ್ಕೆ ಹರಿಜನ ಅಭ್ಯರ್ಥಿಗಳು ಸಿಗದೇ ಇದ್ದಾಗ ಸಂವಿಧಾನ ಏನು ಹೇಳುತ್ತದೆಂದರೆ, ಆ ಹುದ್ದೆಯನ್ನು ಕಾದಿರಿಸಿ ಮುಂದೆ ಅಭ್ಯರ್ಥಿಗಳು ಸಿಕ್ಕಿದಾಗ ಭರ್ತಿ ಮಾಡಬೇಕೆಂದು ಇದೆ. ಆದರೆ, ಇವೊತ್ತು ಈ ಕೆಲಸವನ್ನು ಮಾಡದೆ ಉದ್ದೇಶಪೂರ್ವಕವಾಗಿ ಇಂತಹ ಹುದ್ದೆಗಳನ್ನು ಭರ್ತಿ ಮಾಡುವಾಗ ಹರಿಜನ ಅಭ್ಯರ್ಥಿಗಳು ಸಿಗುವುದಿಲ್ಲ ಎಂದು ಒಂದು ನೆಪ ಹೇಳಿ ಬೇರೆ ಅಭ್ಯರ್ಥಿಗಳನ್ನು ತುಂಬುವ ಪ್ರಯತ್ನ ಮಾಡಿದರೆ ಹರಿಜನ ಗಿರಜನರ ಸಂವಿಧಾನಾತ್ಮಕ ಹಕ್ಕನ್ನು ಹಗಲು ದರೋಡೆ ಮಾಡಿದ ಹಾಗೆ ಆಗುತ್ತದೆ. ಇಂತಹ ಅಧಿಕಾರಿಗಳ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆಂಬುದು ನನ್ನ ಪ್ರಶ್ನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಪ್ರಶ್ನೆ ಕೇಳಲಿಲ್ಲ.

ಶ್ರೀಮತಿ ಮೋಟಮ್ಮ : ಇದೇ ನಾನು ಪ್ರಶ್ನೆ ಕೇಳುವುದು. ಉದ್ದೇಶಪೂರ್ವಕವಾಗಿ ತಪ್ಪು ಮಾಡಿದಂಥ ಅಧಿಕಾರಿಗಳ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ? ಇದು ಹಗಲು ದರೋಡೆ ಎಂದು ನಾನು ಹೇಳುತ್ತಿದ್ದೇನೆ. ಹರಿಜನರಿಗೆ ಸಿಗುವ ಹಕ್ಕನ್ನು ಕಿತ್ತು ಬೇರೆಯವರಿಗೆ ಕೊಟ್ಟು ಹಗಲು ದರೋಡೆ ಮಾಡಿದಂಥ ಅಧಿಕಾರಿಗಳ ಬಗ್ಗೆ ತಮ್ಮ ಕ್ರಮ ಏನು ಎನ್ನತಕ್ಕಂಥಾದ್ದು ನನ್ನ ಪ್ರಶ್ನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಸನ್ಮಾನ್ಯ ಉಪಾಧ್ಯಕ್ಷೆಣಿಯವರೆ, ಮಾನ್ಯ ಸದಸ್ಯರ ಅಭಿಪ್ರಾಯವನ್ನು ಮತ್ತು ಭಾವನೆಗಳನ್ನು ನಾನು ಪೂರ್ತಿಯಾಗಿ ತಿಳಿದುಕೊಂಡಿದ್ದೇನೆ. ಸುಮಾರು ಹನ್ನೊಂದು ಹುದ್ದೆಗಳನ್ನು 1984ರಲ್ಲಿ ಏನು ಭರ್ತಿ ಮಾಡಿದ್ದರು, ಆಗ ಇದರಲ್ಲಿ ರೆಕಾರ್ಡ್ ಕೀಪರ್, ಸ್ವಾಗತಕಾರ ಮತ್ತು ಸಹಾಯ ಖಜಾಂಜಿ ಈ ಹುದ್ದೆಗಳಿಗೆ ಮೀಸಲಾತಿ ಪ್ರಕಾರ ಪರಿಶಿಷ್ಟ ಜಾತಿಗೆ ಸೇರಿದ ಅಭ್ಯರ್ಥಿಗಳನ್ನೇ ಆಯ್ಕೆ ಮಾಡಲಾಗಿದೆ. ಆದರೆ ವ್ಯವಸ್ಥಾಪಕರು, ಅಂತರಿಕ ಲೆಕ್ಕ ಪರಿಶೋಧನೆ, ಯೋಜನಾಧಿಕಾರಿ, ಕಾರ್ಯ ನಿರ್ವಾಹಕ ಸದಸ್ಯರ ಆಪ್ತ ಸಹಾಯಕ ಹುದ್ದೆಗಳಿಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ಅಭ್ಯರ್ಥಿಗಳಿಂದ ಅರ್ಜಿಗಳು ಬರದಿರುವ ಕಾರಣ ಬೇರೆ ವರ್ಗದ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗಿದೆ ಎಂದು ನಮಗೆ ಅವರು ಮಾಹಿತಿಯನ್ನು ಒದಗಿಸಿದ್ದಾರೆ.

ಆಮೇಲೆ ಸಹಾಯಕ ಅಭಿಯಂತರರು, ಸಹಾಯಕರು, ಕಿವಿಯ ಸಹಾಯಕರು, ಈ ಹುದ್ದೆಗಳಿಗೆ ನೇಮಕ ಮಾಡುವಾಗ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ಅಭ್ಯರ್ಥಿಗಳನ್ನೇ ಆಯ್ಕೆ ಮಾಡಿರುತ್ತಾರೆ. ಆದ್ದರಿಂದ ಈ ಮೂರು ಹುದ್ದೆಗಳು ಏನು ಇವೆ, ವ್ಯವಸ್ಥಾಪಕರು ಆಂತರಿಕ ಲೆಕ್ಕಪರಿಶೋಧಕರು, ಅಂದರೆ ಚಾರ್ಟರ್ಡ್ ಅಕೌಂಟೆಂಟ್ ಬೇಕಾಗುತ್ತದೆ. ಆದರೆ ಯೋಜನಾ ಅಧಿಕಾರಿ, ಕಾರ್ಯನಿರ್ವಾಹಕ ಸದಸ್ಯರ ಹುದ್ದೆಗಳಿಗೆ ಚಾರ್ಟರ್ಡ್ ಅಕೌಂಟೆಂಟ್ ಬೇಕಾಗಿಲ್ಲ. It is not that technical affair. ಅದನ್ನು ನಾನು ಒಪ್ಪುತ್ತೇನೆ. ಏಕೆಂದರೆ ಇದು ಸ್ವಲ್ಪ ಸಲುಗೆಯಾಗಿದೆ. ನಮ್ಮ ಅನೇಕ ಇಲಾಖೆಗಳಲ್ಲಿ ಕೂಡ ನಾವು ಪರಿಶೀಲನೆ ಮಾಡಿದಾಗ, ಏನು ಸಂವಿಧಾನದ ಪ್ರಕಾರ ಮತ್ತು ನೇಮಕಾತಿ ನಿಯಮಗಳ ಪ್ರಕಾರ ನೇಮಕಾತಿ ಮಾಡಬೇಕೊ ಮೀಸಲಾತಿ ಒದಗಿಸಬೇಕೊ, ಅದನ್ನು ಒಂದು ರೀತಿ ರೂಢಿಯಿಂದ, ಬಹಳ ಸಲುಗೆಯಿಂದ ತೆಗೆದುಕೊಂಡು ನಿಜವಾಗಿ ಸಾಮಾಜಿಕ ನ್ಯಾಯವನ್ನು ಅಪಹರಿಸತಕ್ಕಂತಹ ಕೆಲಸ ಬೇರೆ ಬೇರೆ ಇಲಾಖೆಗಳಲ್ಲಿ ಕೆಲವು ಸಲ ಆಗುತ್ತದೆ. ಒಂದು ವಿಚಾರವನ್ನು ನಾನು ಹೇಳಲಿಕ್ಕೆ ಇಚ್ಚಿಪಡುತ್ತೇನೆ. ನಾನು ಖಂಡಿತವಾಗಿಯೂ ಇದನ್ನು ತನಿಖೆ ಮಾಡುತ್ತೇನೆ. ಏಕೆಂದರೆ ಇದು ಹೇಳುವುದಕ್ಕೆ ಬಹಳ ಸುಲಭ. ಪರಿಶಿಷ್ಟ ವರ್ಗದವರು ಮತ್ತು ಪರಿಶಿಷ್ಟ ಪಂಗಡದವರು ಸಿಗಲಿಲ್ಲ ಎಂದು ಹೇಳುವುದಕ್ಕೆ ಬಹಳ ಸುಲಭ. ಆದರೆ ಅದು ಸಾಧನೆ ಮಾಡಿದರೆ, ಮನಸ್ಸು ಇದ್ದರೆ ಮಾರ್ಗ ಯಾವತ್ತೂ ಇದೆ. ಏಕೆಂದರೆ, ಒಂದು ಅಡ್ವರ್‌ಟೈಸ್‌ಮೆಂಟ್ ಮಾಡಿ ಬರದಿದ್ದರೆ, ಇನ್ನೊಂದು ಅಡ್ವರ್‌ಟೈಸ್‌ಮೆಂಟ್ ಮಾಡಬೇಕು. ಮನಸ್ಸು ಇದ್ದರೆ ಮಾಡಲಿಕ್ಕೆ ಆಗುತ್ತದೆ. ಆದರೆ ಇದು ಯಾವುದೇ ಮೀಸಲಾತಿ, ಈ ಸಾಮಾಜಿಕ ನ್ಯಾಯವನ್ನು ಕೊಡತಕ್ಕಂತಹ ಒಂದು ಕಾರ್ಯಕ್ರಮ ಏನಿದೆ ಅದು ಬರೇ ತೋರಿಕೆಗೆ ಮಾತ್ರ ಇರಬಹುದು. ಅದಕ್ಕೆ ಅವರವರ ಮಟ್ಟದಲ್ಲಿ ಅಂದರೆ, ಅಧಿಕಾರಿಗಳ ಮಟ್ಟದಲ್ಲಿ ಮತ್ತು ಸರ್ಕಾರದ ಮಟ್ಟದಲ್ಲಿ ಅದಕ್ಕೆ ಹೃದಯ ಮಿಡಿಯಬೇಕಾಗುತ್ತದೆ. ಅದರಿಂದ ಇದರಲ್ಲಿ ಏನಾದರೂ ಲೋಪದೋಷ ಆಗಿದ್ದರೆ, ಅಚಾತುರ್ಯವಾಗಿದ್ದರೆ, ಅದರ ಬಗ್ಗೆ ನಾನು ತನಿಖೆ ಮಾಡುತ್ತೇನೆ, ಮತ್ತು ಕ್ರಮ ಕೂಡ ತೆಗೆದುಕೊಳ್ಳುತ್ತೇನೆ. ಆದರೆ ಮುಂದೆ ಎಲ್ಲಾ ಇಲಾಖೆಯಗಳಿಗೂ ಕೂಡ ಈ ಬಗ್ಗೆ ಒಂದು ಕಟ್ಟುನಿಟ್ಟಾದಂಥ ಆದೇಶವನ್ನು ಕೊಟ್ಟು, ಇಂತಹ ಸಾಮಾಜಿಕ ನ್ಯಾಯ ಕೊಡುವುದರಲ್ಲಿ ಬೇರೆ ಯಾವುದೇ ವಿಚಾರಗಳಲ್ಲಿ ಒಪ್ಪಂದ ಇಲ್ಲ. We are not going to compromise on the question of this philosophy.

ಆದ್ದರಿಂದ ಈ ಬಗ್ಗೆ ತಮ್ಮ ಭಾವನೆಯನ್ನು ನಾವು ಅರ್ಥಮಾಡಿಕೊಂಡಿದ್ದೇವೆ. ಇದರ ಬಗ್ಗೆ ತನಿಖೆ ಮಾಡುತ್ತೇನೆ. ಮುಂದೆ ಯಾವುದೇ ಇಲಾಖೆಯಿಂದ ಈ ರೀತಿಯ ತೊಂದರೆ, ಅನ್ಯಾಯ ಆಗದ ರೀತಿಯಲ್ಲಿ ನಾವು ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀಮತಿ ಮೋಟಮ್ಮ : ನಾನು ಮುಖ್ಯಮಂತ್ರಿಗಳಿಗೆ ಈ ಬಗ್ಗೆ ಅಭಿನಂದಿಸುತ್ತೇನೆ. ಆದರೆ ನನ್ನದು ಒಂದು ಬಹಳ ಮುಖ್ಯವಾದ ಪ್ರಶ್ನೆ ಏನೆಂದರೆ, ಈಗ ಏನು ಕೆಲವು ಹುದ್ದೆಗಳು ಏನು ಕೈತಪ್ಪಿ ಹೋಗಿವೆ.....

ಉಪಾಧ್ಯಕ್ಷೆಯವರು : ಈಗ ಅವರು ಪೂರ್ತಿಯಾಗಿ ಉತ್ತರವನ್ನು ಕೊಟ್ಟುಬಿಟ್ಟಿದ್ದಾರೆ.

ಶ್ರೀಮತಿ ಮೋಟಮ್ಮ : ಕೆಲವು ಹುದ್ದೆಗಳು ಈ ಜನಕ್ಕೆ ಏನು ಸಿಗಬೇಕಾಗಿತ್ತೋ ಅವು ಕೈತಪ್ಪಿ ಹೋಗಿವೆ. 1984ರಲ್ಲಿ ಸಾಕಷ್ಟು ಹುದ್ದೆಗಳನ್ನು ಕಾಲ್‌ಫರ್ ಮಾಡಿದ್ದಾರೆ. ಅದರಲ್ಲಿ ಮ್ಯಾನೇಜರ್ ಪೋಸ್ಟ್, ಪ್ರಾಜೆಕ್ಟ್ ಆಫೀಸರ್ಸ್ ಪೋಸ್ಟ್, ಅಸಿಸ್ಟೆಂಟ್ ಇಂಜನಿಯರ್ ಪೋಸ್ಟ್ ಪರ್ಸನಲ್ ಅಸಿಸ್ಟಂಟ್ ಪೋಸ್ಟ್, ರೆಕಾರ್ಡ್ ಕೀಪರ್, ಸ್ಟನೋಗ್ರಾಫರ್ ಪೋಸ್ಟ್ ಏನಿದೆ, ಇದರಲ್ಲೇ ವ್ಯತ್ಯಾಸ ಮಾಡಿದ್ದಾರೆ. ಏಕೆಂದರೆ, ಎರಡು ಪೋಸ್ಟ್, ಹರಿಜನರಿಗೆ ಇಟ್ಟಿದ್ದರೆ ಎರಡನ್ನು ತುಂಬಲಿಕ್ಕೆ ಆಗಿಲ್ಲ, ಕೆಲವರಿಗೆ ಕೊಟ್ಟಿದ್ದಾರೆ. ಕೆಲವೊಂದನ್ನು ಮೇಜರ್ ಕಮ್ಯೂನಿಟಿಗೆ ತುಂಬಿದ್ದಾರೆ. ಅದಕ್ಕೆ ನಾನು ಏನು ಹೇಳುತ್ತಿದ್ದೇನೆಂದರೆ ರಿಸರ್ವೇಶನ್‌ನಲ್ಲಿ ಹರಿಜನರಿಗೆ ಸಿಗಬೇಕಾದ ಒಂದು ಹುದ್ದೆ ಈಗ ಏನು ಕೈತಪ್ಪಿಹೋಗಿದೆ. ಅದು ಪುನಃ ತುಂಬಿ ಅವರಿಗೆ ನ್ಯಾಯ ಒದಗಿಸಿಕೊಡುತ್ತೀರಾ ಎನ್ನುವುದು ಮೊದಲನೆ ಪ್ರಶ್ನೆ. ಎರಡನೆಯದು, ದಿನಾಂಕ 28-10-92ರಲ್ಲಿ ವಿಧಾನಸಭೆಯ ಹರಿಜನ ಗಿರಿಜನ ಕಲ್ಯಾಣ ಸಮಿತಿ ಈ ಒಂದು ಬೋರ್ಡಿಗೆ ಭೇಟಿ ಮಾಡಿ ಸಂಬಂಧಪಟ್ಟ ಅನ್ಯಾಯಗಳನ್ನೆಲ್ಲಾ ನಾವು ಅಧಿಕಾರಿಗಳ ಗಮನಕ್ಕೆ ತಂದು, ಏಕೆ ಹೀಗೆ ಆಗಿದೆ, ಇದನ್ನು ಕೂಡಲೇ ಸ್ಪರಿಪಡಿಸಬೇಕು ಎಂದ್ದು ಹೇಳಿ, ಇಷ್ಟು ದಿವಸಗಳಾದರೂ ಸಹ ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಕ್ರಮ ತೆಗೆದುಕೊಳ್ಳಲಿಲ್ಲ. ಇದಕ್ಕೆ ಮುಖ್ಯ ಕಾರಣ ಸರ್ಕಾರವನ್ನು ಯಾರು ಪ್ರತಿನಿಧಿಸುತ್ತಾರೆ ಅಂತಹ ಅಧಿಕಾರಿಗಳು ಮೊದಲನೆಯದಾಗಿ ಹೊಣೆಯಾಗಿರುತ್ತಾರೆ. ಬೋರ್ಡ್ ಅಧಿಕಾರಿಗಳು ಹೊಣೆಯಾಗಿರುತ್ತಾರೆ. ಅವರ ಮೇಲೆ ನೀವು ಉಗ್ರ ಕ್ರಮ ತೆಗೆದುಕೊಳ್ಳಬೇಕು ಎಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯಸದಸ್ಯರು ಕೊನೆಯಲ್ಲಿ ಹೇಳಿದಂತಹ ವಿಚಾರಗಳಿಗೆ ನಾನು ಮೊದಲೆ ಉತ್ತರ ಕೊಟ್ಟಿದ್ದೇನೆ. ಆದರೆ ಬ್ಯಾಕ್‌ಲ್ಯಾಗ್ ತುಂಬಿಸತಕ್ಕಂತಹ ರೀತಿಯಲ್ಲಿ ಏನು ಕಾರ್ಯಕ್ರಮ ತೆಗೆದುಕೊಳ್ಳ ಬೇಕೋ ಅದನ್ನು ನಾನು ತೆಗೆದುಕೊಳ್ಳುತ್ತೇನೆ.

ಉಪಾಧ್ಯಕ್ಷಣಿಯವರು : ಶ್ರೀ ಕೆ. ಲಕ್ಷ್ಮಣ್ಣನವರ 123(481)ನೇ ಪ್ರಶ್ನೆಗೆ ಮಾನ್ಯ ಮುಖ್ಯ ಮಂತ್ರಿಗಳು ಟೈಂ ಕೇಳಿದ್ದಾರೆ, ಆದ್ದರಿಂದ ಈ ಪ್ರಶ್ನೆಯಲ್ಲಿ ವಿತ್‌ಹೆಲ್ಡ್ ಮಾಡುತ್ತಿದ್ದೇವೆ. ಅದನ್ನು ಮುಂದೆ ತೆಗೆದುಕೊಳ್ಳುತ್ತೇವೆ.

ರಾಜ್ಯದಲ್ಲಿ ಮಹಿಳೆಯರ ಮೇಲೆ ಅತ್ಯಾಚಾರ

422 - ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಮಹಿಳೆಯರ ಮೇಲೆ ಅತ್ಯಾಚಾರದ ಆಕ್ರಮಣ ನಡೆಯುತ್ತಿರುವ ಪ್ರಮಾಣ ಹೆಚ್ಚುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಅದನ್ನು ತಡೆಯಲು ಸರ್ಕಾರವು ಯಾವ ಪರಿಣಾಮಕಾರಿ ಕ್ರಮ ಕೈಗೊಂಡಿದೆ?

ಇ) ಅತ್ಯಾಚಾರ ಮತ್ತು ದೌರ್ಜನ್ಯಕ್ಕೊಳಗಾದ ಮಹಿಳೆಯರನ್ನು ಮರುವಸತಿಗೊಳಿಸಲು ಸರ್ಕಾರ ತೆಗೆದುಕೊಂಡ ತೀವ್ರ ಕ್ರಮಗಳೇನು?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) :

ಅ) ರಾಜ್ಯದ ಮಹಿಳೆಯರ ಮೇಲೆ ಅತ್ಯಾಚಾರದ ಪ್ರಮಾಣ ಹೆಚ್ಚಾಗಿರುವುದು ಕಂಡು ಬಂದಿಲ್ಲ.